SC: 66/2024
PW:01 CW:01

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 66/2024

| | |
|---|---|
| PW | 01 |
| CW | 01 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 16.10.2025.

| | | |
|---|---|---|
| ಸಾಕ್ಷಿಯ ಹೆಸರು | : | ಶುಭಾಂಬಿಕ್ ಆರ್ |
| ಗಂಡನ ಹೆಸರು | : | ಪ್ರಸನ್ನ ಕಮಾರ್ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪಿ.ಎಸ್.ಐ ಬೆಸ್ಕಾಂ ಜಾಗೃತ ದಳ, ರಾಮನಗರ |
| ವಾಸಸ್ಥಳ | : | ರಾಮನಗರ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

1. ನಾನು ದಿನಾಂಕ 19.02.2024 ರಿಂದ 15.06.2024 ರವರೆಗೆ ಗೌರಿಬಿದನೂರು ನಗರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ದೂರುದಾರರಾಗಿ ನಮ್ಮ ಠಾಣೆಯ ಪಿ.ಎಸ್.ಐ ಆದ ಚಾಸಾ 15 ಭಾರತಿ ಎಂಬುವವರಿಗೆ ಸಲ್ಲಿಸಿರುತ್ತೇನೆ. ದಿ.29.02.2024 ರಂದು ನಾನು ರಾತ್ರಿ ಗಸ್ತು ಕರ್ತವ್ಯಕ್ಕೆ ನೇಮಕಗೊಂಡಿದ್ದು ನನ್ನ ಜೊತೆ ಗಸ್ತು ಕರ್ತವ್ಯಕ್ಕೆ ಚಾಸಾ 11 ಹಾಗೂ ಚಾಸಾ 12 ರವರು ಇದ್ದರು. ಆ ದಿನ ನಾನು ಗಸ್ತು ಮಾಡಿಕೊಂಡು ದಿ.01.03.2024 ರಂದು ಬೆಳಗ್ಗಿನ ಜಾವ 01.00 ಗಂಟೆ ಸಮಯದಲ್ಲಿ ಗೊಟಕನಪುರ ರಸ್ತೆಗೆ ಬಂದಾಗ ಸದರಿ ರಸ್ತೆಯ

ಎಡ ಬದಿಯಲ್ಲಿದ್ದ ಪೊದೆಯ ಬಳಿ ಯಾರೋ ಜನರು ಕುಳಿತುಕೊಂಡು ಮಾತನಾಡುತ್ತಿರುವುದು ಕೇಳಿಸಿರುತ್ತದೆ. ನಾನು ಸದರಿ ಸ್ಥಳದಲ್ಲಿ ನೋಡಿದಾಗ ಅಲ್ಲಿ ಕುಳಿತಿದ್ದ ವ್ಯಕ್ತಿಗಳು ತಮ್ಮ ಕೈಗಳಲ್ಲಿ ದೊಣ್ಣೆ, ಮಚ್ಚು ಹಿಡಿದುಕೊಂಡಿದ್ದು, ದರೋಡೆ ಮಾಡಲು ಹೊಂಚು ಹಾಕುತ್ತಿದ್ದು ಕಂಡು ಬಂದ ಕಾರಣ ನಾನು ಸಿಬ್ಬಂದಿಗಳನ್ನು ಸ್ಥಳದಲ್ಲಿ ಬಿಟ್ಟು ಠಾಣೆಗೆ ವಾಪಸ್ಸು ಬಂದು ದೂರು ಬೆರಳಚ್ಚು ಮಾಡಿಸಿ ಠಾಣೆಗೆ ನೀಡಿರುತ್ತೇನೆ. ಸಾಕ್ಷಿದಾರರು ತಾನು ನೀಡಿದ ದೂರು, ಅರದಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನು ನಿಪಿ 1 ಹಾಗೂ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಆ ದಿನ ಸ್ಥಳದಲ್ಲಿ ಕುಳಿತಿದ್ದ ವ್ಯಕ್ತಿಗಳನ್ನು ದೂರದಿಂದ ನೋಡಿದ್ದು ಅವರನ್ನು ನೋಡಿದ್ದಲ್ಲಿ ನನಗೆ ಗುರುತಿಸಲು ಆಗುವುದಿಲ್ಲ.

**<u>ಪಾಟೀ ಸವಾಲುಃ 1 ಮತ್ತು 2 ಆರೋಪಿತರ ಪರ ಶ್ರೀ ಹೆಚ್.ಎನ್ .ಎಮ್ ವಕೀಲರಿಂದಃ</u>**

3. ನಮ್ಮ ಠಾಣೆಯಿಂದ ಗೊಟಕನಪುರ ಅಂದಾಜು 3 ಕಿ.ಮೀ ದೂರ ಇರುತ್ತದೆ ಎಂದರೆ ಸಾಕ್ಷಿಯು 2 ಕಿ.ಮೀ ದೂರ ಇರುತ್ತದೆ ಎಂದು ನುಡಿದಿರುತ್ತಾರೆ. ನಾವು ರಾತ್ರಿ ಗಸ್ತು ಕರ್ತವ್ಯ ಮಾಡುವಾಗ ನಮ್ಮ ಜೀಪಿನ ಸೈರನ್ ಆನ್ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಅದನ್ನು ಯಾವಾಗಲೂ ಆನ್ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಪೊದೆಯಲ್ಲಿ ಕುಳಿತಿದ್ದ ವ್ಯಕ್ತಿಗಳನ್ನು ಸುಮಾರು 50 ಅಡಿ ದೂರದಲ್ಲಿ ನೋಡಿರುತ್ತೇನೆ. ಆ ವ್ಯಕ್ತಿಗಳು ಅಲ್ಲಿ ಮಾತನಾಡುತ್ತ ಕುಳಿತಿದ್ದು ನಾವು ಸ್ಥಳಕ್ಕೆ ಹೋಗಿದ್ದನ್ನು ಅವರು ಗುರುತಿಲಿಲ್ಲ. ಆ ದಿನ ಗಸ್ತು ಕರ್ತವ್ಯಕ್ಕೆ ನಾವೆಲ್ಲರೂ ಪೊಲೀಸ್ ಸಮವಸ್ತ್ರದಲ್ಲಿ ಹೋಗಿದ್ದೆವು. ಆ ವ್ಯಕ್ತಿಗಳನ್ನು ನೋಡಿದ ನಂತರ ನಾವು ಅವರನ್ನು ಹಿಡಿಯಲು ಪ್ರಯತ್ನಿಸಿಲ್ಲ. ಆರೋಪಿತು ಕುಳಿತಿದ್ದ ಪೊದೆಯಿಂದ ದೂರದಲ್ಲಿ ವಿದ್ಯುತ್ ಕಂಬ ಇತ್ತು.

4. ನಾನು ಠಾಣೆಗೆ ವಾಪಸ್ತು ಬಂದ ನಂತರ ನಾನು ಹೇಳಿದ್ದನ್ನು ಠಾಣೆಯಲ್ಲಿದ್ದವರ ನಿಪಿ 1 ರಂತೆ ಬೆರಳಚ್ಚು ಮಾಡಿರುತ್ತಾರೆ. ನಾನು ಠಾಣೆಗೆ ವಾಪಸ್ತು ಬಂದ ನಂತರ ಪುನಃ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ನಿಪಿ 1 ರಲ್ಲಿ ಹೇಳಿದಂತೆ ನಾವು ಆ ದಿನ ಯಾವ ಯಾವ ಸ್ಥಳದಲ್ಲಿ ಗಸ್ತು ಮಾಡಿರುತ್ತೇವೆ ಎಂದು ಠಾಣಾ ದಿನಚರಿ ಪುಸ್ತಕದಲ್ಲಿ ನಮೂದಿಸಿರುತ್ತೇವೆ. ಯಾವ ವ್ಯಕ್ತಿಯ ಬಳಿ ಯಾವ ಆಯುಧ ಇತ್ತು ಎಂದು ನಾನು ನಿಖರವಾಗಿ ನೋಡಿಲ್ಲ, ಆದರೆ ಆ ವ್ಯಕ್ತಿಗಳ ಹತ್ತಿರ ದೊಣ್ಣೆ ಮಚ್ಚು ಇತ್ತು ಎಂದು ನುಡಿದಿರುತ್ತಾರೆ. ರಾತ್ರಿ ವೇಳೆ ಕತ್ತಲು ಆವರಿಸಿದ ಕಾರಣ 50 ಅಡಿ ಕುತಿಳಿದ್ದ ವ್ಯಕ್ತಿಗಳು ಯಾರು ಕಾಣುವುದಿಲ್ಲ ಎಂದರೆ ಸಾಕ್ಷಿಯು ವಿದ್ಯುತ್ ಕಂಬದ ದೀಪದ ಬೆಳಕಿನಲ್ಲಿ ಅವರು ಕಾಣಿಸಿರುವುದಾಗಿ ಉತ್ತರಿಸಿರುತ್ತಾರೆ. ನಿಪಿ 1 ರಲ್ಲಿ ವಿದ್ಯುತ್ ಕಂಬ ಇದ್ದ ವಿಚಾರವನ್ನು ಕಾಣಿಸಿಲ್ಲ ಎಂದರೆ, ಸಾಕ್ಷಿಯು ಅದರ ಅವಶ್ಯಕತೆ ಇಲ್ಲದಿದ್ದ ಕಾರಣ ಅದನ್ನು ನಮೂದಿಸಿಲ್ಲ ಎಂದು ಉತ್ತರಿಸುತ್ತಾರೆ.

5. ನಾನು ಆ ದಿನ ಸದರಿ ಸ್ಥ., ಳಕ್ಕೆ ಗಸ್ತು ಕರ್ತವ್ಯಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಯಾವುದೇ ವ್ಯಕ್ತಿಗಳು ದೊಣ್ಣೆ ಹಾಗೂ ಮಚ್ಚುಗಳನ್ನು ಹಿಡಿದು ಕುಳಿತುಕೊಳ್ಳದೇ ಇದ್ದ ಕಾರಣ ನಮ್ಮ ಠಾಣೆಯ ಅಂಕಿ ಅಂಶಗಳಿಗಾಗಿ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಗೊಟಕನಪುರ ರಸ್ತೆಯಲ್ಲಿ ಜನ ಸಂಚಾರ ಇರುತ್ತದೆ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ಕೃತ್ಯ ಆಗದೇ ಇದ್ದರೂ ಸಹ ನಿಪಿ 1 ರಂತೆ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಹೆಚ್.ಆರ್.ವಿ ವಕೀಲರಿಂದಃ**</u>

6. ಆ ದಿನ ಪೊದೆಯಲ್ಲಿ ಕುಳಿತಿದ್ದ ಜನರು ಅಸ್ಪಷ್ಟವಾಗಿ ಕಾಣಿಸುತ್ತಿದ್ದು ಈ ವಿಚಾರವನ್ನು ನಿಪಿ 1 ರಲ್ಲಿ ನಾನು ನಮೂದಿಸಿಲ್ಲ. ಅದರಂತೆ ನಿಪಿ 1 ರಲ್ಲಿ ಕಾಣಿಸಲು ನನಗೆ ತೊಂದರೆ

ಇರಲಿಲ್ಲ. ಆ ವ್ಯಕ್ತಿಗಳು ನಾನು ನೋಡಿದ ಸಮಯದಲ್ಲಿ ಸ್ಥಳದಲ್ಲಿ ಕುಳಿತಿದ್ದರು. ನಾನು ಪೊದೆಯ ಬಳಿ ನೋಡಿದಾಗ ಅಲ್ಲಿ ಕುಳಿತಿದ್ದರು ಎಂದು ಹೇಳಿದ ವ್ಯಕ್ತಿಗಳ ಚಹರೆ, ಅವರ ವಯಸ್ಸು ಎಷ್ಟು ಸ್ಪಷ್ಟವಾಗಿ ನನಗೆ ಕಂಡಿಲ್ಲ. ನಮಗೆ ಸರ್ಕಾರದಿಂದ ಮೊಬೈಲ್ ಸರಬರಾಜು ಮಾಡಿರುತ್ತಾರೆ ಎಂದರೆ ಸರಿ. ನಾನು ಸ್ಥಳದಲ್ಲಿದ್ದು ಫೋನ್ ಮೂಲಕ ಠಾಣೆಗೆ ಕರೆ ಮಾಡಿ ಹೆಚ್ಚಿನ ಸಿಬ್ಬಂದಿಗಳನ್ನು ಕರೆಸಿಕೊಳ್ಳಲು ತೊಂದರೆ ಇರಲಿಲ್ಲ, ಆದರೆ ದೂರು ದಾಖಲಿಸ ಬೇಕಾಗಿದ್ದ ಕಾರಣ ಸಿಬ್ಬಂದಿಗಳನ್ನು ಸ್ಥಳಕ್ಕೆ ಕರೆಸಿಕೊಂಡಿಲ್ಲ.

7. ನಾನು ಕರ್ತವ್ಯಕ್ಕೆ ಠಾಣೆಯಿಂದ ಹೊರಗೆ ಹೋದಾಗ ಠಾಣಾಧಿಕಾರಿಗಳು ಠಾಣೆಯಲ್ಲಿ ಇರುತ್ತಾರೆ. ನಮ್ಮ ಮೊಬೈಲ್ ನಿಂದ ಠಾಣಾಧಿಕಾರಿಗಳಿಗೆ ಕರೆ ಮಾಡಿ ದೂರು ದಾಖಲಿಸುವ ಅವಕಾಶ ಇರುತ್ತದೆ ಎಂದರೆ ಸರಿ. ಠಾಣಾಧಿಕಾರಿಗೆ ಕರೆ ಮಾಡಿ ದೂರು ಸಲ್ಲಿಸಲು ನಿಮಗೆ ಸಮಸ್ಯೆ ಇತ್ತಾ ಎಂದರೆ ಸಾಕ್ಷಿಯು ನಾನು ಅಪರಾಧ ವಿಭಾಗದ ಪಿ.ಎಸ್.ಐ ಗೆ ದೂರು ದಾಖಲಿಸಬೇಕಾಗಿದ್ದರಿಂದ ನಾನು ಫೋನ್ ಮೂಲಕ ದೂರು ದಾಖಲಿಸಲು ಸಮಸ್ಯೆ ಇತ್ತು ಎಂದು ನುಡಿದಿರುತ್ತಾರೆ. ನಾನು ಕರ್ತವ್ಯದ ಬಗ್ಗೆ ಸಿ.ಪಿ.ಐ ರವರಿಗೆ ವರದಿ ಮಾಡಬೇಕೆಂದರೆ ಸರಿ. ನಮ್ಮ ಠಾಣೆಯ ಅಪರಾಧ ವಿಭಾಗ ಪಿ.ಎಸ್.ಐ ರವರಿಗೆ ನಾನು ವರದಿ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿಯು ಅವರಿಗೆ ಘಟನೆಯ ವಿಚಾರವನ್ನು ನಾನು ತಿಳಿಸಬೇಕೆಂದು ನುಡಿದಿರುತ್ತಾರೆ. ಈ ವಿಚಾರವನ್ನು ನಾನು ನಿಪಿ 1 ರಲ್ಲಿ ತಿಳಿಸಿಲ್ಲ.

8. ನಿಪಿ 1 ರ ಪ್ರಕಾರ ನಾವು ಸ್ಥಳದಲ್ಲಿ ಸದರಿ ಗುಂಪಿನ ವ್ಯಕ್ತಿಗಳನ್ನು ಹಿಡಿಯಲು ಪ್ರಯತ್ನಿಸಿಲ್ಲ ಎಂದರೆ ಸರಿ. ಯಾವ ಕಾರಣಕ್ಕಾಗಿ ಆ ವ್ಯಕ್ತಿಗಳನ್ನು ಹಿಡಿಯಲು ಪ್ರಯತ್ನಿಸಿಲ್ಲ ಎಂದು ನಿಪಿ 1 ರಲ್ಲಿ ತಿಳಿಸಿಲ್ಲ ಎಂದರೆ ಸರಿ. ರಾತ್ರಿ ವೇಳೆ ಆ ಪೊದೆ ಯಾವ ಪೊದೆ ಎಂದು

ನನಗೆ ತಿಳಿದು ಬಂದಿಲ್ಲ. ನನಗೆ ಆ ದಿನ ಯಾವುದೇ ದೊಣ್ಣೆ ಹಾಗೂ ಮಚ್ಚು ಕಾಣದೇ ಇದ್ದರೂ ಸಹ ನಾನು ನಿಪಿ 1 ರಲ್ಲಿ ಅಂದಾಜಿನಲ್ಲಿ ಅದರ ಬಗ್ಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ನಿಪಿ 1 ದೂರನ್ನು ನೀಡಿರುವುದನ್ನು ಹೊರತು ಪಡಿಸಿ ಬೇರೆ ಕರ್ತವ್ಯ ನಿರ್ವ ಹಿಸಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಆ ದಿನ ಸದರಿ ಸ್ಥಳದಲ್ಲಿ ಯಾವುದೇ ಗುಂಪಿನ ವ್ಯಕ್ತಿಗಳು ಹಾಜರು ಇಲ್ಲದೇ ಕಾರಣ ನಾನಾಗಲೀ ಅಥವಾ ನನ್ನ ಜೊತೆ ಇದ್ದ ಸಿಬ್ಬಂದಿಗಳು ಅವರನ್ನು ಹಿಡಿಯಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ಇದೇ ಕಾರಣಕ್ಕಾಗಿ ನಾನು ನ್ಯಾಯಾಲಯದಲ್ಲಿ ಆರೋಪಿತರನ್ನು ಗುರುತಿಸಲು ಆಗಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ:</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 16.10.2025 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

**ಸಹಿ/-**
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.